## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2020-21ನೇ ಸಾಲಿನ ರಾಜ್ಯ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿರುವ ಸುಜಲ-III EXIT STRATEGY ಅನುಮೋದಿತ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. 2020-21 ನೇ ಸಾಲಿನ ರಾಜ್ಯ ಆಯವ್ಯಯ ಭಾಷಣದ ಕಂಡಿಕೆ: 37
2. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 172 ವೆಚ್ಚ-4/2020, ದಿನಾಂಕ: 30-05-2020.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ ಸಂಖ್ಯೆ:ಜಅಇ/ಸುಜಲ-III/ ಎ.ಸ್ಟ್ರಾ /2019-20, ದಿನಾಂಕ: 30-6-2020

*****

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ 2020-21 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ: 37 ರಲ್ಲಿ " ವಿಶ್ವಬ್ಯಾಂಕ್ ಪ್ರಾಯೋಜಿತ ಸುಜಲಾ-III ಯೋಜನೆಗಳನ್ನು 12 ಜಿಲ್ಲೆಗಳಲ್ಲಿನ ಮಳೆ ಆಶ್ರಿತ ಜಲಾನಯನ ಪ್ರದೇಶಗಳ 14 ಲಕ್ಷ ಹೆಕ್ಟೇರ್ ಗೂ ಹೆಚ್ಚಿನ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗಿ ಬೆಳೆ ಆಯ್ಕೆ, ಪೌಷ್ಟಿಕಾಂಶ ಮತ್ತು ಜಲ ನಿರ್ವಹಣೆ ಮತ್ತು ಸಂರಕ್ಷಣೆ ಪದ್ಧತಿಗಳಿಗಾಗಿ ನಿರ್ದಿಷ್ಟ ಶಿಫಾರಸ್ಸುಗಳನ್ನು ನೀಡುವ ವೈಜ್ಞಾನಿಕ ಸಂಸ್ಥೆಗಳ ಮೂಲಕ ವಿವರವಾದ ಅಂಶವಾರು ಭೂ ಸಂಪನ್ಮೂಲ ಯಾದಿಯನ್ನು ಸಿದ್ಧಪಡಿಸಲಾಗಿದೆ. ಈ ಶಿಫಾರಸ್ಸುಗಳ ಪ್ರಸಾರಕ್ಕಾಗಿ, 10 ಕೋಟಿ ರೂ.ಗಳ ವೆಚ್ಚದಲ್ಲಿ 2500 ಗ್ರಾಮಗಳಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿನ ಮಳೆ ಆಶ್ರಿತ ಕೃಷಿಕರಿಗೆ ಭೂ ಸಂಪನ್ಮೂಲಯಾದಿಯ ತರಬೇತಿ ನೀಡಿ ಕಾರ್ಡ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ (2)ರಲ್ಲಿ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 172 ವೆಚ್ಚ-4/2020, ದಿನಾಂಕ: 30-05-2020 ರಲ್ಲಿ ಕೃಷಿ ಇಲಾಖೆಗೆ ಒದಗಿಸಿದ ಪರಿಷ್ಕೃತ ಆಯವ್ಯಯ ಅಂದಾಜಿನಲ್ಲಿ ಅನುಬಂಧ-1 ರಲ್ಲಿ ನೀಡಿರುವ ಕಾರ್ಯಕ್ರಮಗಳಿಗೆ ಹಣ ಬಿಡುಗಡೆಯ ಅಧಿಕಾರವನ್ನು ಆಡಳಿತ ಇಲಾಖೆಗೆ ನೀಡಿರುವುದಾಗಿ ಉಲ್ಲೇಖಿಸಲಾಗಿದೆ. ಸದರಿ ಅನುಬಂಧದಲ್ಲಿ ಈ ಕಾರ್ಯಕ್ರಮಕ್ಕೆ ಲೆಕ್ಕ ಶೀರ್ಷಿಕೆ:2402-00-102-0-31 ರಡಿ ರೂ.986.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ (3)ರಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಪತ್ರದಲ್ಲಿ 2020-21 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ: 37 ರಂತೆ ಸುಜಲ-III EXIT STRATEGY ಅನುಮೋದಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ರೂ.986.00 ಲಕ್ಷಗಳ ವೆಚ್ಚದ ಕಾರ್ಯಕ್ರಮದ ಕರಡು ಮಾರ್ಗಸೂಚಿಗಳನ್ನು ಅನುಮೋದಿಸಿ, ಆದೇಶ ಹೊರಡಿಸಲು ಕೋರಿರುತ್ತಾರೆ.

ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2020-21 ಸಾಲಿನ ಆಯವ್ಯಯದ ಭಾಷಣದ ಕಂಡಿಕೆ:37 ರ ಘೋಷಣೆಯಂತೆ ಸುಜಲ-III -EXIT STRATEGY ಯೋಜನೆಯನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರವು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: AGRI-AML/89/2020, ಬೆಂಗಳೂರು ದಿನಾಂಕ:14-08-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2020-21 ಸಾಲಿನ ಆಯವ್ಯಯದ ಭಾಷಣದ ಕಂಡಿಕೆ:37 ರ ಘೋಷಣೆಯಂತೆ ಸುಜಲ-III ಯೋಜನೆ EXIT STRATEGY ಯೋಜನೆಯನ್ನು ಐದು ವರ್ಷಗಳ ಕಾಲ ಅಂದರೆ 2020-21 ನೇ ಸಾಲಿನಿಂದ ಡಿಸೆಂಬರ್ 2024 ರವರೆಗೆ ಅನುಬಂಧದಲ್ಲಿ ನಮೂದಿಸಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಆದೇಶಿಸಿ ಹೊರಡಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 249 ವೆಚ್ಚ-4/2020, ದಿನಾಂಕ: 29-07-2020 ಮತ್ತು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: PDS-PFO/10/2020, ದಿನಾಂಕ: 30-07-2020 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ.

P. Satya 14/8/2020
(ಪಿ.ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (G & SSA), ಹೊಸಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (E & RSA), ಹೊಸಕಟ್ಟಡ, ಆಡಿಟ್ ಭವನ, ಬೆಂಗಳೂರು-01
3. ಪ್ರಧಾನ ಮಹಾಲೇಖಪಾಲರು (A & E), ಕರ್ನಾಟಕ ಪಾರ್ಕ ಹೌಸ್ ರಸ್ತೆ, ಬೆಂಗಳೂರು-.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ಬಿ & ಆರ್) ವಿಧಾನ ಸೌಧ, ಬೆಂಗಳೂರು
5. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
6. ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4) ವಿಧಾನ ಸೌಧ, ಬೆಂಗಳೂರು.
10. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜಭವನ, ಬೆಂಗಳೂರು.
11. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ / ಇಲಾಖೆಯ ಅಂತರ್ಜಾಲ ತಾಣ.

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ, ಮತ್ತು ರೇಷ್ಮೆ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ-1 & 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ.

******

**ಸರ್ಕಾರದ ಆದೇಶ ಸಂಖ್ಯೆ: AGRI-AML/89/2020, ದಿನಾಂಕ: 14-08-2020 ರ ಅನುಬಂಧ**

**ಸುಜಲ-III ಯೋಜನೆಯ ನಿರ್ಗಮನ ಕಾರ್ಯಕ್ರಮ ಯೋಜನಾ ಮಾರ್ಗಸೂಚಿಗಳು**

**(Sujala-III Exit Strategy Programme Project Guidelines)**

ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೆಕ್ಟೇರ್ ಇದ್ದು, ಅದರಲ್ಲಿ 129.70 ಲಕ್ಷ ಹೆಕ್ಟೇರ್ ಪ್ರದೇಶವು ಜಲಾನಯನ ಉಪಚಾರಕ್ಕೆ ಲಭ್ಯವಿರುತ್ತದೆ. ಇದುವರೆಗೆ 70.13 ಲಕ್ಷ ಹೆಕ್ಟೇರ್ ಪ್ರದೇಶವನ್ನು ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳಡಿಯ ಜಲಾನಯನ ಚಟುವಟಿಕೆಗಳ ಮೂಲಕ ಉಪಚರಿಸಲಾಗಿದೆ. ಉಳಿದ 52.31 ಲಕ್ಷ ಹೆಕ್ಟೇರ್ ಪ್ರದೇಶವು ಜಲಾನಯನ ತತ್ವ ಆಧರಿಸಿ ವೈಜ್ಞಾನಿಕವಾಗಿ ಜಲಾನಯನ ಉಪಚಾರ ಕೈಗೊಳ್ಳಲು ಲಭ್ಯವಿರುತ್ತದೆ.

ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಕೆಡಬ್ಲ್ಯೂಡಿಪಿ-II) (ಸ್ಥಳೀಯವಾಗಿ ಸುಜಲ -III ಎಂದು ಕರೆಯಲ್ಪಡುತ್ತದೆ) ಯನ್ನು ವಿಶ್ವ ಬ್ಯಾಂಕಿನ ನೆರವಿನೊಂದಿಗೆ ರೂಪಿಸಿ ರಾಜ್ಯದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಪುರ, ಗದಗ, ದಾವಣಗೆರೆ, ಚಿಕ್ಕಮಗಳೂರು ಬಳ್ಳಾರಿ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳ 2534 ಮಳೆಯಾಶ್ರಿತ ಕಿರುಜಲಾನಯನಗಳ 1.4 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 2013 ರಿಂದ 2019ನೇ ಸಾಲಿನವರೆಗೆ 14 ವೈಜ್ಞಾನಿಕ ಪಾಲುದಾರರು ಮತ್ತು ಇತರ ಸಂಸ್ಥೆಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗಿದ್ದು, ದಿನಾಂಕ 31.12.2019 ಕ್ಕೆ ಯೋಜನಾವಧಿ ಮುಕ್ತಾಯಗೊಂಡಿರುತ್ತದೆ. ಈ ಯೋಜನೆಯಲ್ಲಿ, ರಾಷ್ಟ್ರೀಯ ಮಣ್ಣು ಸರ್ವೇಕ್ಷಣೆ ಮತ್ತು ಭೂಬಳಕೆ ನಿಯೋಜನೆ ಸಂಸ್ಥೆ (ICAR-NBSS&LUP) ಮತ್ತು ರಾಜ್ಯ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯಗಳ ಪಾಲುದಾರಿಕೆಯಲ್ಲಿ ಯೋಜನಾ ಪ್ರದೇಶದಲ್ಲಿ ಕಿರು ಜಲಾನಯನ-ವಾರು, ಭೂ ಭಾಗವಾರು ಭೂ ಸಂಪನ್ಮೂಲ ಸಮೀಕ್ಷೆ (Land Resource Inventory-LRI) ಕೈಗೊಂಡು, ದತ್ತಾಂಶ ಸಂಗ್ರಹಿಸಿ ವಿವಿಧ ಭೂಸಂಪನ್ಮೂಲ ನಕ್ಷೆಗಳನ್ನು ತಯಾರಿಸಲಾಗಿರುತ್ತದೆ.

ಸುಜಲ-III ಯೋಜನೆಯಡಿ ಯೋಜನಾ ಪಾಲುದಾರ ಸಂಸ್ಥೆಗಳಲ್ಲಿ ಜಲಾನಯನಗಳ ಮಣ್ಣು ಮತ್ತು ನೀರಿನ ಮಾದರಿಗಳನ್ನು ವಿಶ್ಲೇಷಿಸಿ ದತ್ತಾಂಶವನ್ನು ಡಿಜಿಟಲೀಕರಣಗೊಳಿಸಲು, ಥೀಮ್ಯಾಟಿಕ್ ನಕ್ಷೆಗಳು, ವರದಿಗಳು ಮತ್ತು ಅಟ್ಲಾಸ್‌ಗಳನ್ನು ತಯಾರಿಸಲು ಅಗತ್ಯವಿರುವ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಸೃಜಿಸಲಾಗಿರುತ್ತದೆ. ಡಿಜಿಟಲ್ ಗ್ರಂಥಾಲಯ, ಭೂ ಸಂಪನ್ಮೂಲ ಪೋರ್ಟಲ್, ನಿರ್ಧಾರ ಬೆಂಬಲ ವ್ಯವಸ್ಥೆ ಮತ್ತು ಮೊಬೈಲ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಿ ದತ್ತಾಂಶವನ್ನು ಅಪ್‌ಲೋಡ್ ಮಾಡಲಾಗಿದ್ದು ರೈತರು, ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳು ಮತ್ತು ಇತರೆ ಬಳಕೆದಾರರಿಗೆ ಭೂಸಂಪನ್ಮೂಲ ಮಾಹಿತಿ ಮತ್ತು ಶಿಫಾರಸ್ಸುಗಳನ್ನು ಬಳಕೆಗೆ ಲಭ್ಯಗೊಳಿಸಲಾಗಿದೆ.

ಭೂ ಸಂಪನ್ಮೂಲ ಮಾಹಿತಿಯಿಂದ ರೈತ ಸಮುದಾಯವು ಸ್ಥಳ ನಿರ್ದಿಷ್ಟವಾದ ಸೂಕ್ತ ಬೆಳೆ, ಅಗತ್ಯ ಪ್ರಮಾಣದಲ್ಲಿ ಸೂಕ್ತ ಪರಿಕರಗಳ / ರಸಗೊಬ್ಬರದ ಬಳಕೆ, ಮಣ್ಣು ಮತ್ತು ನೀರಿನ ಸಂರಕ್ಷಣೆ ಕ್ರಮಗಳು ಸೇರಿದಂತೆ ವಿವಿಧ ವೈಜ್ಞಾನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಸಾಗುವಳಿ ವೆಚ್ಚ ಕಡಿಮೆ ಮಾಡಿ, ಕೃಷಿ ಆದಾಯ ಹೆಚ್ಚಿಸಿಕೊಳ್ಳಲು ಹಾಗೂ ಮಣ್ಣಿನ ಆರೋಗ್ಯ ಮತ್ತು ಫಲವತ್ತತೆ ಕಾಪಾಡಿಕೊಳ್ಳಲು ಸಹಕಾರಿಯಾಗಿರುತ್ತದೆ.

ಎಲ್.ಆರ್.ಐ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ನೆರವು ನೀಡುವ ನಿಟ್ಟಿನಲ್ಲಿ 2879 ಗ್ರಾಮ ಮಟ್ಟದ ತರಬೇತಿಗಳನ್ನು ಆಯೋಜಿಸಿ ಸುಮಾರು ಒಂದು ಲಕ್ಷ ರೈತರಿಗೆ ಗ್ರಾಮ ಮಟ್ಟದ ತರಬೇತಿಗಳನ್ನು ನೀಡಲಾಗಿದ್ದು, ಸರ್ವೆ

ನಂಬರ್‌ವಾರು ಮುದ್ರಿಸಿದ ಸುಮಾರು 3.5 ಲಕ್ಷ ಎಲ್.ಆರ್.ಐ ಕಾರ್ಡ್‌ಗಳನ್ನು ತರಬೇತಿ ನಂತರ ಸಂಬಂಧಿತ ರೈತರಿಗೆ ವಿತರಿಸಲಾಗಿದೆ.

ಆದ ಕಾರಣ, ಸುಜಲ-III ಯೋಜನಾ ನಂತರದ ಅವಧಿಯಲ್ಲಿ ತಾಂತ್ರಿಕ ಪಾಲುದಾರರ ಸಹಯೋಗದಲ್ಲಿ ಯೋಜನೆಯಡಿ ಸಂಗ್ರಹಿಸಿದ ದತ್ತಾಂಶವನ್ನು, ಡಿಜಿಟಲ್ ಗ್ರಂಥಾಲಯ, ಪೋರ್ಟಲ್, ನಿರ್ಧಾರ ಬೆಂಬಲ ವ್ಯವಸ್ಥೆ, ಮೊಬೈಲ್ ಅಪ್ಲಿಕೇಷನ್, ವೈಜ್ಞಾನಿಕ ಉಪಕರಣಗಳು ಮತ್ತು ಇತರೆ ಮೂಲಸೌಕರ್ಯಗಳನ್ನು ಕಾಲಕಾಲಕ್ಕೆ ನವೀಕರಣ ಮತ್ತು ನಿರ್ವಹಣೆ ಮಾಡುವ ಮೂಲಕ ಸುಸ್ಥಿರಗೊಳಿಸುವುದು ಮತ್ತು ಯೋಜನಾ ವ್ಯಾಪ್ತಿಯ ಎಲ್ಲ ರೈತರು ಭೂಸಂಪನ್ಮೂಲ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ಅರಿವು ಮೂಡಿಸುವ ನಿಟ್ಟಿನಲ್ಲಿ ಗ್ರಾಮ ಮಟ್ಟದ ತರಬೇತಿಗಳನ್ನು ಆಯೋಜಿಸಿ ಭೂಸಂಪನ್ಮೂಲ ಕಾರ್ಡ್ ವಿತರಿಸುವುದು ಅಗತ್ಯವಾಗಿರುತ್ತದೆ.

2020-21 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರು "ವಿಶ್ವ ಬ್ಯಾಂಕ್ ನೆರವಿನ ಸುಜಲ-III ಯೋಜನೆಯನ್ನು 12 ಜಿಲ್ಲೆಗಳಲ್ಲಿನ 14 ಲಕ್ಷ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗಿ ಬೆಳೆ ಆಯ್ಕೆ, ಪೌಷ್ಟಿಕಾಂಶ ಮತ್ತು ಜಲ ನಿರ್ವಹಣೆ ಮತ್ತು ಸಂರಕ್ಷಣೆ ಪದ್ಧತಿಗಳಿಗಾಗಿ ನಿರ್ದಿಷ್ಟ ಶಿಫಾರಸ್ಸುಗಳನ್ನು ನೀಡುವ ವೈಜ್ಞಾನಿಕ ಸಂಸ್ಥೆಗಳ ಮೂಲಕ ಭೂ ಸಂಪನ್ಮೂಲಗಳ ವಿವರವಾದ ಅಂಶವಾರು ಭೂ ಸಂಪನ್ಮೂಲ ಯಾದಿಯನ್ನು ಸಿದ್ಧಪಡಿಸಲಾಗಿದೆ. ಈ ಶಿಫಾರಸ್ಸುಗಳ ಪ್ರಸಾರಕ್ಕಾಗಿ ರೂ.10.00 ಕೋಟಿಗಳ ವೆಚ್ಚದಲ್ಲಿ 2500 ಗ್ರಾಮಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಮಳೆ ಆಶ್ರಿತ ಕೃಷಿಕರಿಗೆ ಭೂ ಸಂಪನ್ಮೂಲ ಯಾದಿಯ ತರಬೇತಿ ನೀಡಿ ಕಾರ್ಡ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು" ಎಂದು ಘೋಷಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ರೂ.4037.82 ಲಕ್ಷ ಮೊತ್ತದ ಸುಜಲ-III ಯೋಜನೆ ನಿರ್ಗಮನ ಕಾರ್ಯಕ್ರಮ (Exit Strategy) ರೂಪಿಸಲಾಗಿದ್ದು, ಸುಜಲ-III ಯೋಜನೆ ವ್ಯಾಪ್ತಿಯ 12 ಜಿಲ್ಲೆಗಳ ಯೋಜನಾ ಪ್ರದೇಶಗಳಲ್ಲಿ ಜನವರಿ 2020 ರಿಂದ ಡಿಸೆಂಬರ್ 2024 ರವರೆಗೆ 05 ವರ್ಷಗಳ ಕಾಲ ಅನುಷ್ಠಾನ ಮಾಡಲಾಗುವುದು. ಈ ಸಂಬಂಧ ಯೋಜನಾ ಪಾಲುದಾರ ಸಂಸ್ಥೆಗಳ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದ್ದು, ಯೋಜನಾ ಜಿಲ್ಲೆಗಳಲ್ಲಿ ರೈತ ಸಂಪರ್ಕ ಕೇಂದ್ರಗಳ (ಆರ್.ಎಸ್.ಕೆ) ಮೂಲಕ ಗ್ರಾಮ ಮಟ್ಟದ ತರಬೇತಿಗಳನ್ನು ಹಮ್ಮಿಕೊಂಡು ರೈತರಿಗೆ ಭೂಸಂಪನ್ಮೂಲ ಕಾರ್ಡ್ ವಿತರಿಸಲು ಯೋಜನೆ ಸಿದ್ಧಪಡಿಸಲಾಗಿರುತ್ತದೆ.

1. **ಕಾರ್ಯಕ್ರಮದ ಉದ್ದೇಶಗಳು (Objectives of the Programme):**

1. ಭೂಸಂಪನ್ಮೂಲ ದತ್ತಾಂಶಗಳು, ಡಿಜಿಟಲ್ ಗ್ರಂಥಾಲಯ, ನಿರ್ಧಾರ ಬೆಂಬಲ ವ್ಯವಸ್ಥೆಗಳು ಮತ್ತು ಭೂ ಸಂಪನ್ಮೂಲ ಪೋರ್ಟಲ್ ಗಳ ನವೀಕರಣ ಮತ್ತು ನಿರ್ವಹಣೆ
2. ಪಾಲುದಾರ ಸಂಸ್ಥೆಗಳಲ್ಲಿ ಸೃಜಿಸಲಾದ / ಸ್ವತ್ತುಗಳ ನಿರ್ವಹಣೆ
3. ರೈತರಿಗೆ ಗ್ರಾಮ ಮಟ್ಟದಲ್ಲಿ ಭೂ ಸಂಪನ್ಮೂಲ ಮಾಹಿತಿ ತರಬೇತಿಗಳನ್ನು ನೀಡುವುದು
4. ಭೂ ಸಂಪನ್ಮೂಲ ಶಿಫಾರಸುಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ನೆರವು ನೀಡುವುದು
5. ಡಿಜಿಟಲ್ ಗ್ರಂಥಾಲಯ ಮತ್ತು ಭೂ ಸಂಪನ್ಮೂಲ ಪೋರ್ಟಲ್ ಗಳ ಬಳಕೆ ಮತ್ತು ಉಪಯುಕ್ತತೆ ಕುರಿತು ರೈತರು ಮತ್ತು ಅಭಿವೃದ್ಧಿ ಇಲಾಖೆಗಳಿಗೆ ಅರಿವು ಮೂಡಿಸುವುದು
6. ಸುಜಲ-III ಯೋಜನೆಯಡಿ ಸ್ಥಾಪಿಸಲಾದ ಸಣ್ಣ ಜಾನುವಾರುಗಳ ವೀರ್ಯ ಬ್ಯಾಂಕ್ ಅನ್ನು ಜನಪ್ರಿಯಗೊಳಿಸುವುದು
7. ಮಾದರಿ ಕಿರು ಜಲಾನಯನಗಳಲ್ಲಿ ಜಲವಿಜ್ಞಾನದ ಅಧ್ಯಯನವನ್ನು ಮುಂದುವರೆಸುವುದು

## 2. ಯೋಜನೆಯ ವಿಶಿಷ್ಟ ಗುಣಗಳು (Special features of the Programme):

1. ಸುಜಲ-III ಯೋಜನೆಯ ತಾಂತ್ರಿಕ ಪಾಲುದಾರರ ಮೂಲಕ ನಿರ್ಗಮನ ಕಾರ್ಯತಂತ್ರಗಳನ್ನು (Exit Strategy) ಅನುಷ್ಠಾನಗೊಳಿಸಲಾಗುವುದು
2. ಸುಜಲ-III ಯೋಜನೆಯಡಿ ಪಾಲುದಾರ ಸಂಸ್ಥೆಗಳಲ್ಲಿ ಈಗಾಗಲೇ ಸೃಜಿಸಲಾಗಿರುವ ಸೌಲಭ್ಯಗಳನ್ನು Exit Strategy ಅಡಿ ಬಳಸಿಕೊಳ್ಳಲಾಗುವುದು ಹಾಗೂ ಕಾರ್ಯಚರಣೆ ಮತ್ತು ನಿರ್ವಹಣೆ ವೆಚ್ಚಗಳನ್ನು ಮಾತ್ರ ಒದಗಿಸಲಾಗುವುದು
3. ಭೂ ಸಂಪನ್ಮೂಲ ಮಾಹಿತಿ ನವೀಕರಣಕ್ಕಾಗಿ ಯೋಜನಾ ವ್ಯಾಪ್ತಿ ಜಲಾನಯನಗಳಲ್ಲಿ ಬೆಂಚ್ ಮಾರ್ಕ್ ಸ್ಥಳಗಳನ್ನು ಗುರುತಿಸಿ ಭೂ ಸಂಪನ್ಮೂಲ ಸಮೀಕ್ಷೆ ಕೈಗೊಂಡು ದತ್ತಾಂಶ ವಿಶ್ಲೇಷಿಸಲಾಗುವುದು
4. ಸುಜಲ-III ಜಿಲ್ಲೆಗಳ ಯೋಜನಾ ವ್ಯಾಪ್ತಿಯ ಪ್ರದೇಶಗಳಲ್ಲಿ ಸಂಬಂಧಿತ ರೈತ ಸಂಪರ್ಕ ಕೇಂದ್ರಗಳ ಮೂಲಕ 2500 ಗ್ರಾಮಗಳಲ್ಲಿ ರೈತರಿಗೆ ಗ್ರಾಮ ಮಟ್ಟದ ಭೂ ಸಂಪನ್ಮೂಲ ತರಬೇತಿಗಳನ್ನು ಆಯೋಜಿಸಿ ಭೂಸಂಪನ್ಮೂಲ ಕಾರ್ಡ್ ವಿತರಿಸಲಾಗುವುದು
5. ಗ್ರಾಮ ಮಟ್ಟದ ತರಬೇತಿಗಳ ಆಯೋಜನೆಗೆ ಎಲ್.ಆರ್.ಐ ಎಕ್ಸ್‌ಟೆನ್ಶನ್ ಮ್ಯಾನೇಜರ್ ಸಿಬ್ಬಂದಿ ಸೇವೆ ಬಳಸಿಕೊಳ್ಳಲಾಗುವುದು
6. ಡಿಜಿಟಲ್ ಗ್ರಂಥಾಲಯ, ಭೂ ಸಂಪನ್ಮೂಲ ಪೋರ್ಟಲ್, ನಿರ್ಧಾರ ಬೆಂಬಲ ವ್ಯವಸ್ಥೆ, ಮೊಬೈಲ್ ಅಪ್ಲಿಕೇಶನ್ ಬಳಕೆ ಮತ್ತು ಉಪಯುಕ್ತತೆ ಕುರಿತು ರೈತರು ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಅರಿವು ಮೂಡಿಸಲು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರಗಳನ್ನು ಆಯೋಜಿಸಲಾಗುವುದು
7. ಪ್ರಸ್ತಾಪಿತ ವಿಶ್ವ ಬ್ಯಾಂಕ್ ನೆರವಿನ ನೂತನ - Rejuvenating Watersheds for Agriculture Resilience through Innovative Development (REWARD) ಯೋಜನೆಯಡಿಯ ಭೂ ಮತ್ತು ಜಲ ಸಂಪನ್ಮೂಲ ಅಧ್ಯಯನ ಮಾಹಿತಿಯನ್ನು ದತ್ತಾಂಶ ನವೀಕರಣ ಮತ್ತು ಭೂ ಸಂಪನ್ಮೂಲ ಪೋರ್ಟಲ್ ಬಲವರ್ಧನೆಗೊಳಿಸಲು ಬಳಸಲಾಗುವುದು

## 3. ಯೋಜನಾ ಪ್ರದೇಶ (Project Area):

ಸುಜಲ-III ಯೋಜನೆ ಅನುಷ್ಠಾನಗೊಳಿಸಿದ ರಾಜ್ಯದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಪುರ, ಗದಗ, ದಾವಣಗೆರೆ, ಚಿಕ್ಕಮಗಳೂರು ಬಳ್ಳಾರಿ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳ 2534 ಕಿರು ಜಲಾನಯನಗಳ 1.4 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗುವುದು.

## 4. ಯೋಜನೆಯ ಫಲಾನುಭವಿಗಳು:

ಸುಜಲ-III ಯೋಜನೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವರ್ಗದ ರೈತರು ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ಗ್ರಾಮ ಮಟ್ಟದ ತರಬೇತಿಗಳನ್ನು ಆಯೋಜಿಸಿ ಸರ್ವೆ ನಂಬರುವಾರು ಭೂ ಸಂಪನ್ಮೂಲ ಕಾರ್ಡ್‌ಗಳನ್ನು ವಿತರಿಸುವ ಮೂಲಕ ಭೂ ಸಂಪನ್ಮೂಲ ಶಿಫಾರಸ್ಸುಗಳನ್ನು ರೈತರಿಗೆ ಒದಗಿಸಲಾಗುತ್ತದೆ.

## 5. ಯೋಜನಾ ಅವಧಿ:

ಸುಜಲ-III ಯೋಜನೆ ನಿರ್ಗಮನ ಕಾರ್ಯಕ್ರಮವನ್ನು ಜನವರಿ 2020 ರಿಂದ ಡಿಸೆಂಬರ್ 2024 ರವರೆಗೆ 05 ವರ್ಷಗಳ ಕಾಲ ಅನುಷ್ಠಾನ ಮಾಡಲಾಗುವುದು.

6. **ಯೋಜನಾ ಪಾಲುದಾರರು :**

ಸುಜಲ-III ಯೋಜನೆಯ ಕೆಳಕಂಡ ತಾಂತ್ರಿಕ ಪಾಲುದಾರ ಸಂಸ್ಥೆಗಳ ಮೂಲಕ ಯೋಜನೆ ನಿರ್ಗಮನ ಕಾರ್ಯಕ್ರಮದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗುವುದು:

1. ರಾಷ್ಟ್ರೀಯ ಮಣ್ಣು ಸರ್ವೇಕ್ಷಣೆ ಮತ್ತು ಭೂಬಳಕೆ ನಿಯೋಜನೆ ಸಂಸ್ಥೆ (ICAR-NBSS & LUP))
2. ರಾಜ್ಯದ ಕೃಷಿ, ತೋಟಗಾರಿಕೆ ಹಾಗೂ ಪಶುಸಂಗೋಪನೆ ವಿಶ್ವವಿದ್ಯಾಲಯಗಳು
3. ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
4. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ
5. ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ

ಮುಂದುವರೆದು, ಭೂ ಸಂಪನ್ಮೂಲ ಮಾಹಿತಿ ಪ್ರಸರಣೆ ಕುರಿತ ಕಾರ್ಯಾಗಾರಗಳನ್ನು ಮತ್ತು ಗ್ರಾಮ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಆಯೋಜಿಸಲಾಗುವುದು.

7. **ಅನುಷ್ಠಾನ ವಿಧಾನ :**

ಎ) ರಾಜ್ಯ ಕೃಷಿ / ತೋಟಗಾರಿಕೆ ವಿಶ್ವವಿದ್ಯಾಲಯಗಳು ಮತ್ತು ಇತರ ಪಾಲುದಾರ ಸಂಸ್ಥೆಗಳು ಬೆಂಚ್ ಮಾರ್ಕ್ ಸ್ಥಳಗಳಿಗೆ ಕ್ಷೇತ್ರ ಬೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸುತ್ತವೆ ಮತ್ತು ಈ ಮಾದರಿಗಳನ್ನು ಪ್ರಯೋಗಾಲಯದಲ್ಲಿ ವಿಶ್ಲೇಷಿಸಿ ದತ್ತಾಂಶವನ್ನು ಸಂಸ್ಕರಿಸಿ ಡಿಜಿಟಲ್ ಗ್ರಂಥಾಲಯದಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಈ ಸಂಬಂಧ, ಸದರಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಅಗತ್ಯ ಅನುದಾನ ಒದಗಿಸಲಾಗುತ್ತದೆ.

ಪ್ರತಿ ತಾಲ್ಲೂಕಿನಲ್ಲಿ ಭೂ ಸಂಪನ್ಮೂಲ ಮಾಹಿತಿ ಲಭ್ಯವಿರುವ ಗ್ರಾಮಗಳ ಆಧಾರದ ಮೇಲೆ ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬ ಎಲ್.ಆರ್.ಐ ವಿಸ್ತರಣಾ ವ್ಯವಸ್ಥಾಪಕರನ್ನು ನೇಮಿಸಲಾಗುವುದು ಮತ್ತು ಈ ಎಲ್.ಆರ್.ಐ ವಿಸ್ತರಣಾ ವ್ಯವಸ್ಥಾಪಕರು ಸಂಬಂಧಪಟ್ಟ ಕೃಷಿ ಅಧಿಕಾರಿಯೊಂದಿಗೆ ಪ್ರತಿ ಕಿರು ಜಲಾನಯನದಲ್ಲಿ ಒಂದು ದಿನದ ಗ್ರಾಮ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಅದರಂತೆ ಪ್ರತಿ ತರಬೇತಿಯಲ್ಲಿ ಅಂದಾಜು 30 ರೈತರಿಗೆ ತರಬೇತಿ ನೀಡಲಾಗುತ್ತದೆ. ತರಬೇತಿ ನಂತರ ಪಾಲ್ಗೊಂಡ ರೈತರಿಗೆ ಭೂಸಂಪನ್ಮೂಲ ಕಾರ್ಡ್‌ಗಳನ್ನು ವಿತರಿಸಲಾಗುತ್ತದೆ ಮತ್ತು ಭೂಸಂಪನ್ಮೂಲ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ನೆರವು ನೀಡಲಾಗುತ್ತದೆ..

**ಬಿ) ಒಗ್ಗೂಡಿಸುವಿಕೆ** : ರಾಜ್ಯದಲ್ಲಿ ಅನುಷ್ಠಾನ ಮಾಡಲು ಪ್ರಸ್ತಾಪಿಸಲಾಗಿರುವ ವಿಶ್ವ ಬ್ಯಾಂಕ್ ನೆರವಿನ ನೂತನ ಬಹು-ರಾಜ್ಯ ಜಲಾನಯನ ಅಭಿವೃದ್ಧಿ ಯೋಜನೆ - Rejuvenating Watersheds for Agriculture Resilience through Innovative Development (REWARD) ಅಡಿ ಮಳೆಯಾಶ್ರಿತ ಪ್ರದೇಶದಲ್ಲಿ ಕೈಗೊಳ್ಳುವ ಭೂ ಸಂಪನ್ಮೂಲ ಮಾಹಿತಿ ಮತ್ತು ಜಲ ವಿಜ್ಞಾನ ಅಧ್ಯಯನ ಮಾಹಿತಿಯನ್ನು ಭೂ ಸಂಪನ್ಮೂಲ ದತ್ತಾಂಶ ಮತ್ತು ನವೀಕರಣ ಮಾಡಲು ಮತ್ತು ಭೂ ಸಂಪನ್ಮೂಲ ಪೋರ್ಟಲ್ ಬಲವರ್ಧನೆಗೊಳಿಸಲು ಬಳಸಲಾಗುತ್ತದೆ

8. **ಯೋಜನೆಯ ಅನುಷ್ಠಾನ ಮೇಲ್ವಿಚಾರಣೆ:**

1. ರಾಜ್ಯ ಮಟ್ಟದಲ್ಲಿ ಉನ್ನತ ಮಟ್ಟದ ಸಮಿತಿಯಾದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ Project Empowered Committee (PEC) ಸಮಿತಿಯ ಮೂಲಕ ಕಾಲಕಾಲಕ್ಕೆ ಕಾರ್ಯಕ್ರಮದ ಪ್ರಗತಿ ಪರಿಶೀಲನೆ, ಮಾರ್ಗದರ್ಶನ ಮತ್ತು ಅನುಷ್ಠಾನ ಮೇಲ್ವಿಚಾರಣೆಯನ್ನು ಮಾಡಲಾಗುವುದು.

2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯ Project Technical Cell (PTC) ಸಮಿತಿ ಮೂಲಕ ಕಾಲಕಾಲಕ್ಕೆ ಕಾರ್ಯಚಟುವಟಿಕೆಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ಪರಿಶೀಲನೆ, ಅನುದಾನ ಬಿಡುಗಡೆ , ಅಗತ್ಯ ಸಲಹೆ ಸೂಚನೆಗಳನ್ನು ನೀಡುವುದು ಸೇರಿದಂತೆ ಕಾರ್ಯಕ್ರಮ ಅನುಷ್ಠಾನದ ಉಸ್ತುವಾರಿ ಮಾಡಲಾಗುವುದು.

3. ಭೂ ಸಂಪನ್ಮೂಲ ಮಾಹಿತಿ ದತ್ತಾಂಶ, ಪ್ರಯೋಗಾಲಯಗಳು ಮತ್ತು ಇತರ ಸೌಲಭ್ಯಗಳ ನವೀಕರಣ ಮತ್ತು ನಿರ್ವಹಣೆ ಹಾಗೂ ಡಿಜಿಟಲ್ ಗ್ರಂಥಾಲಯ, ನಿರ್ಧಾರ ಬೆಂಬಲ ವ್ಯವಸ್ಥೆ ಮತ್ತು ಭೂ ಸಂಪನ್ಮೂಲ ಮಾಹಿತಿ ಪೋರ್ಟಲ್, ಮೊಬೈಲ್ ಅಪ್ಲಿಕೇಷನ್ ನವೀಕರಣ ಉಸ್ತುವಾರಿಯನ್ನು ಆಯಾ ಯೋಜನಾ ತಾಂತ್ರಿಕ ಪಾಲುದಾರ ಸಂಸ್ಥೆಗಳ ಮುಖ್ಯಸ್ಥರಿಂದ ಕೈಗೊಳ್ಳಲಾಗುವುದು. ಕೇಂದ್ರ ಕಚೇರಿ ಮಟ್ಟದಲ್ಲಿ ರಚಿಸಲಾದ ಯೋಜನೆ ಉಸ್ತುವಾರಿ ಘಟಕದ ಮೂಲಕ ಪಾಲುದಾರ ಸಂಸ್ಥೆಗಳ ಸಹಯೋಗದಲ್ಲಿ ಇದರ ನಿರ್ವಹಣೆ ಮೇಲ್ವಿಚಾರಣೆಯನ್ನು ಮಾಡಲಾಗುವುದು.

4. ಗ್ರಾಮ ಮಟ್ಟದ ಭೂ ಸಂಪನ್ಮೂಲ ತರಬೇತಿಗಳನ್ನು ಹೋಬಳಿ ಮಟ್ಟದಲ್ಲಿ ಇರುವ ರೈತ ಸಂಪರ್ಕ ಕೇಂದ್ರಗಳ ಮೂಲಕ ಆಯೋಜಿಸಲಾಗುವುದು ಮತ್ತು ರೈತ ಸಂಪರ್ಕ ಕೇಂದ್ರಗಳನ್ನು ತಾಲ್ಲೂಕು ಮಟ್ಟದಲ್ಲಿರುವ ಸಹಾಯಕ ಕೃಷಿ ನಿರ್ದೇಶಕರಿಂದ ಉಸ್ತುವಾರಿ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಮೂಲಕ ಅನುಷ್ಠಾನ ಮತ್ತು ಪ್ರಗತಿ ಉಸ್ತುವಾರಿ ಮಾಡಲಾಗುವುದು.

9. **ಯೋಜನೆಯ ಅನುದಾನ ಹಂಚಿಕೆ:**

ಸುಜಲ-III ನಿರ್ಗಮನ ಕಾರ್ಯಕ್ರಮಕ್ಕೆ ರೂ.4037.82 ಲಕ್ಷ ಮೊತ್ತದ ಅನುದಾನವು ಅನುಮೋದನೆಗೊಂಡಿದ್ದು, ಈ ಕೆಳಕಂಡಂತೆ ಕಾರ್ಯಕ್ರಮವಾರು ಮತ್ತು ವರ್ಷವಾರು ತಾತ್ಕಾಲಿಕವಾಗಿ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.

| ಕ್ರ. ಸಂ. | ವಿವರ | ನಿಗದಿಯಾದ ಅನುದಾನ (ರೂ. ಲಕ್ಷಗಳಲ್ಲಿ) | | | | | | |
|---|---|---|---|---|---|---|---|---|
| | | ಜನವರಿ - ಮಾರ್ಚ್ 2020 | 2020-21 | 2021-22 | 2022-23 | 2023-24 | ಡಿಸೆಂಬರ್-2024 ರವರೆಗೆ | ಒಟ್ಟು |
| 1 | LRI ಪಾಲುದಾರ ಸಂಸ್ಥೆಗಳು | 61.87 | 247.50 | 247.50 | 247.50 | 247.50 | 185.63 | 1237.50 |
| 2 | Hydrology Assessment | 29.87 | 119.48 | 119.48 | 119.48 | 119.48 | 89.61 | 597.40 |
| 3 | KSNDMC | 12.50 | 50.00 | 50.00 | 50.00 | 50.00 | 37.50 | 250.00 |
| 5 | Digital Library ಯೋಜನೆ & AMC | 11.63 | 24.05 | 66.95 | 182.15 | 182.15 | 136.61 | 603.54 |
| 6 | KVAFSU | 7.57 | 27.18 | 17.90 | 19.03 | 21.53 | 14.17 | 107.38 |
| 7 | ಗ್ರಾಮ ಮಟ್ಟದ LRI ತರಬೇತಿಗಳು | 242.00 | 1000.00 | 0 | 0 | 0 | 0 | 1242.00 |
| ಒಟ್ಟು | | 365.44 | 1468.21 | 501.83 | 618.16 | 620.66 | 463.52 | 4037.82 |

ಪ್ರಸ್ತುತ 2020-21 ನೇ ಸಾಲಿನಲ್ಲಿ ರೂ.986.00 ಲಕ್ಷಗಳ ಅನುದಾನವನ್ನು ಲೆ.ಶೀ 2402-00-102-0-31 ರಲ್ಲಿ (ಉ.ಶೀ 103-ರೂ. 317.00 ಲಕ್ಷ ಮತ್ತು ಉ.ಶೀ 051 –ರೂ 669.00 ಲಕ್ಷ ) ಈ ಕೆಳಕಂಡಂತೆ ಘಟಕವಾರು ನಿಗದಿಪಡಿಸಲಾಗಿರುತ್ತದೆ.

(Rs. In lakhs)

| Sl. No. | Particulars | Phy. | Fin. |
|---|---|---|---|
| 1 | Salary of LRI Manager | 70 | 105.00 |
| 2 | LRI Trainings | 2534 | 253.00 |
| 3 | Workshops | 45 | 71.00 |
| 4 | ToT | 3 | 4.00 |
| 5 | Printing LRI Cards | 100000 | 20.00 |
| 6 | Exposure Visits | 33 | 15.00 |
| 7 | Updation of LRI database, DSS and LRI Portal | | 468.00 |
| 8 | Project administration cost :Head Quarters<br>Consultants – 2 (90,000 *2*12)<br>GIS Expert – (40,000 *1*12)<br>System Analyst – 1 (43200*1*12)<br>Graphic Designer – 1 (30000*1*12)<br>Project Assistant – 3 (25000*312)<br>DEO – 1 (17500 *1*12)<br>Group D (15000 *1*12)<br>And Administration cost (Stationery, Office expenses) | | 50.00 |
| | **Total:** | | **986.00** |

ಸುಜಲ-III Exit Strategy ಕಾರ್ಯಕ್ರಮದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಈ ಕೆಳಕಂಡ ಸಮಾಲೋಚಕರು/ಸಿಬ್ಬಂದಿ ಸೇವೆ ಬಳಸಿಕೊಳ್ಳುವುದು.

(1) LRI ಎಕ್ಸ್‌ಟೆನ್‌ಷನ್ ಮ್ಯಾನೇಜರ್ : ಸುಜಲ-III ಯೋಜನೆಯಡಿ ಭೂ-ಸಂಪನ್ಮೂಲ ಸಮೀಕ್ಷೆ (ಎಲ್.ಆರ್.ಐ.) ಕಾರ್ಯ ಕೈಗೊಂಡಿರುವ ಪ್ರದೇಶದಲ್ಲಿನ ರೈತರಿಗೆ ಎಲ್.ಆರ್.ಐ. ಮಾಹಿತಿ ಮತ್ತು ಯೋಜನೆಯಡಿ ಅಭಿವೃದ್ಧಿ ಪಡಿಸಿದ ಡಿಜಿಟಲ್ ಗ್ರಂಥಾಲಯ ಹಾಗೂ ಭೂ-ಸಂಪನ್ಮೂಲ ಪೋರ್ಟಲ್ ಉಪಯುಕ್ತತೆ ಮತ್ತು ಬಳಕೆ ಕುರಿತು ಅರಿವು ಮೂಡಿಸಲು ಯೋಜನಾ ಜಿಲ್ಲೆಗಳಲ್ಲಿ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳ ಮೂಲಕ ಗ್ರಾಮ ಮಟ್ಟದ ತರಬೇತಿಗಳನ್ನು ಕೈಗೊಳ್ಳಲು ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಂತೆ ಎಲ್.ಆರ್.ಐ. ಎಕ್ಸ್‌ಟೆನ್‌ಷನ್ ಮ್ಯಾನೇಜರ್‌ಗಳು ಅಗತ್ಯ ಕ್ರಮ ಕೈಗೊಂಡು ಪ್ರಗತಿ ವರದಿಗಳನ್ನು ಕಾಲಕಾಲಕ್ಕೆ ಕೃಷಿ ಅಧಿಕಾರಿಗಳಿಗೆ/ ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.

(2) ಸಮಾಲೋಚಕರು (ತರಬೇತಿ & ದಾಖಲೀಕರಣ) : ಕೇಂದ್ರ ಕಛೇರಿ ಮಟ್ಟದಲ್ಲಿ ಗ್ರಾಮ ಮಟ್ಟದ ತರಬೇತಿಗಳ ಪ್ರಗತಿ ಉಸ್ತುವಾರಿ, ಸುಜಲ-III ಮಾದರಿಯಲ್ಲಿ ಅನುಷ್ಠಾನ ಮಾಡಲಾಗುವ REWARD ಯೋಜನೆಯ ಪೂರ್ವ ಸಿದ್ಧತಾ ಕಾರ್ಯಚಟುವಟಿಕೆಗಳು, ಅಗತ್ಯ ದಾಖಲಾತಿ / ವರದಿಗಳ ತಯಾರಿಕೆ ಇತ್ಯಾದಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು.

(3) ಸಮಾಲೋಚಕರು (ಉಸ್ತುವಾರಿ & ಮೌಲ್ಯಮಾಪನ) : ಕೇಂದ್ರ ಕಛೇರಿ ಮಟ್ಟದಲ್ಲಿ ಸುಜಲ-III Exit Strategy ಯೋಜನೆಯ ಕಾರ್ಯಚಟುವಟಿಕೆಗಳು, ಎಲ್.ಆರ್.ಐ. ಮತ್ತು ಇತರ ಪಾಲುದಾರ ಸಂಸ್ಥೆಗಳ ಕಾರ್ಯನಿರ್ವಹಣೆಯ ಉಸ್ತುವಾರಿ ಕಾರ್ಯಚಟುವಟಿಕೆಗಳನ್ನು ಮತ್ತು ಸುಜಲ-III ಮಾದರಿಯಲ್ಲಿ ಅನುಷ್ಠಾನ ಮಾಡಲಾಗುವ REWARD

ಯೋಜನೆಯ Result Framework Document, Disbursement Linked Indicators, ಪಾಲುದಾರ ಸಂಸ್ಥೆಗಳು ಹಾಗೂ ಉಸ್ತುವಾರಿ ಮತ್ತು ಮೌಲ್ಯಮಾಪನ ಸಂಸ್ಥೆಗಳ ಆಯ್ಕೆ ಇತ್ಯಾದಿ ಪೂರ್ವಸಿದ್ಧತಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು ಹಾಗೂ ಪ್ರಗತಿ ವರದಿಗಳನ್ನು ಕ್ರೂಢೀಕರಿಸಿ ಉತ್ತಮ ಮಟ್ಟದಲ್ಲಿ ಯೋಜನೆ ಅನುಷ್ಠಾನಕ್ಕೆ ಸಹಕಾರಿಯಾಗಿ ಕಾರ್ಯನಿರ್ವಹಿಸುವುದು.

(3) ಜಿ.ಐ.ಎಸ್. ಪರಿಣಿತರು : ಕೇಂದ್ರ ಕಛೇರಿ ಮಟ್ಟದಲ್ಲಿ ಡಿಜಿಟಲ್ ಗ್ರಂಥಾಲಯ, ನಿರ್ಧಾರ ಬೆಂಬಲ ವ್ಯವಸ್ಥೆ ಹಾಗೂ ಭೂ-ಸಂಪನ್ಮೂಲ ಪೋರ್ಟಲ್ ನಿರ್ವಹಣೆ ಮತ್ತು ಅಪ್‌ಡೇಶನ್, ಜಿ.ಐ.ಎಸ್. ಸಂಬಂಧಿಸಿದ ಚಟುವಟಿಕೆಗಳನ್ನು REWARD ಯೋಜನೆಯ ಪೂರ್ವ ಸಿದ್ಧತಾ ಕಾರ್ಯಚಟುವಟಿಕೆಗಳು, ಇತ್ಯಾದಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು.

(4) ಸಿಸ್ಟಮ್ ಅನಾಲಿಸ್ಟ್, ಯೋಜನಾ ಸಹಾಯಕರು ಮತ್ತು ಇತರೆ ಸಿಬ್ಬಂದಿಗಳ ಸೇವೆಯನ್ನು ಕೇಂದ್ರ ಕಛೇರಿ ಮಟ್ಟದಲ್ಲಿ ಸುಜಲ-III Exit Strategy ಯೋಜನೆಯ ಕಾರ್ಯಚಟುವಟಿಕೆಗಳು, ದಾಖಲೀಕರಣ, REWARD ಯೋಜನೆಯ ಪೂರ್ವಸಿದ್ಧತಾ ಕಾರ್ಯಚಟುವಟಿಕೆಗಳು ಇತ್ಯಾದಿ ಸಂಬಂಧಿತ ಚಟುವಟಿಕೆಗಳನ್ನು ನಿರ್ವಹಿಸುವುದು.

P. S'ala 14/8/2020
(ಪಿ.ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)